Adda247 GET IT ON Google Play

1. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಿಯನ್ನು/ಜೋಡಿಗಳನ್ನು ಗುರುತಿಸಿರಿ :
   I. ಗಳಗನಾಥ - ಪ್ರಬುದ್ಧ ಪದ್ಮನಯನೆ
   II. ಹಟ್ಟಿಯಂಗಡಿ ನಾರಾಯಣರಾಯರು - ಆಂಗ್ಲ ಕವಿತಾವಳಿ
   III. ಬಿ.ಎಂ. ಶ್ರೀ - ಇಂಗ್ಲೀಷ್ ಗೀತೆಗಳು
   IV. ಆಲೂರು ವೆಂಕಟರಾಯರು - ವೈಶಾಖಿ
   ಇವುಗಳಲ್ಲಿ ಸರಿಯಾದ ಉತ್ತರ :
   (A) ಕೇವಲ IV
   (B) I, II ಮತ್ತು III ಮಾತ್ರ
   (C) I ಮತ್ತು IV ಮಾತ್ರ
   (D) I ಮತ್ತು III ಮಾತ್ರ

2. ಈ ಕೆಳಗಿನವುಗಳಲ್ಲಿ ತಪ್ಪಾಗಿರುವ ಜೋಡಿಗಳನ್ನು ಗುರುತಿಸಿರಿ :
   I. ಒಕ್ಕಣ್ಣು - ದ್ವಿಗು ಸಮಾಸ
   II. ಹಳೆಗನ್ನಡ - ಕರ್ಮಧಾರಯ ಸಮಾಸ
   III. ಬೆಟ್ಟದಾವರೆ - ತತ್ಪುರುಷ ಸಮಾಸ
   IV. ಮುಕ್ಕಣ್ಣ - ಅರಿ ಸಮಾಸ
   ಇವುಗಳಲ್ಲಿ ಸರಿಯಾದ ಉತ್ತರ :
   (A) I ಮತ್ತು III (B) I, II ಮತ್ತು III
   (C) IV ಮಾತ್ರ (D) III ಮಾತ್ರ

3. 'ಕೂಸು ಮಲಗಿದೆ' ಯಲ್ಲಿರುವ ಲಿಂಗ
   (A) ನಪುಂಸಕಲಿಂಗ (B) ಪುನ್ನಪುಂಸಕಲಿಂಗ
   (C) ನಿತ್ಯ ನಪುಂಸಕಲಿಂಗ (D) ಸತ್ಯ ನಪುಂಸಕಲಿಂಗ

4. ಪಂಚಮೀ ವಿಭಕ್ತಿಯ ಕಾರಕ
   (A) ಅಪಾದಾನ (B) ಸಂಪ್ರದಾನ
   (C) ಸಂಬಂಧ (D) ಅಧಿಕರಣ

Space for Rough Work / ಒರಟು ಕೆಲಸಕ್ಕೆ ಸ್ಥಳ



5. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| *ಪಟ್ಟಿ I* | *ಪಟ್ಟಿ II* |
|---|---|
| a. ಜಾನಪದ ಸ್ವರೂಪ | i. ಹಾ.ಮಾ. ನಾಯಕ್ |
| b. ಲೋಕ ಗೀತೆಗಳು | ii. ಬಿ.ಎಸ್. ಗದ್ದಗಿಮಠ |
| c. ಮಲ್ಲಿಗೆ ದಂಡೆ | iii. ಅರ್ಚಕ ಬಿ. ರಂಗಸ್ವಾಮಿ |
| d. ಹುಟ್ಟಿದ ಹಳ್ಳಿಹಳ್ಳಿಯ ಹಾಡು | iv. ಕಾಪಸೆ ರೇವಪ್ಪ |

ಸಂಕೇತಗಳು :
   (A) a-i, b-ii, c-iii, d-iv (B) a-ii, b-i, c-iv, d-iii
   (C) a-iii, b-iv, c-i, d-ii (D) a-i, b-ii, c-iv, d-iii

6. 'In a purely oral culture everything is folklore' ಎಂದು ಹೇಳಿದ ವಿದ್ವಾಂಸರು ಯಾರು ?
   (A) ಎಸ್ಸಿ ಮೆರಿಸಾ (B) ಬಿ.ಎ. ಬಾಟ್ಕಿನ್
   (C) ಎಡ್ವಿನ್ ಸಿಡ್ನಿ ಹಾರ್ಟ್ಲ್ಯಾಂಡ್ (D) ರಾಲ್ಫ್ ಸ್ಟೀಲ್ ಬಾಗ್ಸ್

7. ಲಿಂಗದೇವರು ಹಳೇಮನೆಯವರ 'ಚಿಕ್ಕದೇವಭೂಪ' ನಾಟಕದಲ್ಲಿ ಈ ಕೆಳಗಿನ ಯಾವ ಜನಪದ ಕಲಾವಿದರನ್ನು ಬಳಸಿಕೊಳ್ಳಲಾಗಿದೆ ?
   (A) ಕಂಸಾಳೆಯವರು (B) ನೀಲಗಾರರು
   (C) ಚೌಡಿಕೆಯವರು (D) ದೊಂಬಿದಾಸರು

8. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| *ಪಟ್ಟಿ I* *(ಜಾನಪದ ವಿದ್ವಾಂಸರು)* | *ಪಟ್ಟಿ II* *(ರಾಷ್ಟ್ರ)* |
|---|---|
| a. ಜೇಕಬ್ ಗ್ರಿಮ್ | i. ಫಿನ್ ಲ್ಯಾಂಡ್ |
| b. ಜೂಲಿಯಸ್ ಕ್ರಾಹ್ನ್ | ii. ಇಂಗ್ಲೆಂಡ್ |
| c. ವಿಲಿಯಂ ಜೆ. ಥಾಂಸ್ | iii. ಜರ್ಮನಿ |
| d. ಎಡ್ವರ್ಡ್ ಬರ್ನೆಟ್ ಟೈಲರ್ | iv. ಅಮೆರಿಕಾ |

ಸಂಕೇತಗಳು :
   (A) a-i, b-ii, c-iii, d-iv (B) a-i, b-iii, c-iv, d-ii
   (C) a-iii, b-i, c-ii, d-iv (D) a-iii, b-ii, c-i, d-iv

Space for Rough Work / ಒರಟು ಕೆಲಸಕ್ಕೆ ಸ್ಥಳ



Adda247
Test Prime
ALL EXAMS, ONE SUBSCRIPTION
1,00,000+ Mock Tests
Personalised Report Card
Unlimited Re-Attempt
600+ Exam Covered
25,000+ Previous Year Papers
500% Refund
IBPS
NABARD
INDIAN RAILWAYS
ATTEMPT FREE MOCK NOW

Adda247 GET IT ON Google Play

9. ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಕೊಡುಗೆ ನೀಡಿದ ಪಾಶ್ಚಾತ್ಯ ವಿದ್ವಾಂಸರು ಮತ್ತು ಅವರು ರಚಿಸಿದ ಕೃತಿಗಳ ಜೋಡಿಯನ್ನು ನೀಡಲಾಗಿದ್ದು, ತಪ್ಪಾಗಿರುವುದನ್ನು ಗುರುತಿಸಿರಿ

(A) The Folk Songs of Southern India - ಚಾರ್ಲ್ಸ್ ಇ. ಗ್ರೋವರ್

(B) Old Deccan Days - ಮೇರಿ ಫ್ರೆರೆ

(C) Hindu Manners, Customs and Ceremonies - ಅಬೆ ದುಬೊಯ್

(D) Canarese Folk Songs - ಫರ್ಡಿನಾಂಡ್ ಕಿಟೆಲ್

10. ವೆರಿಯರ್ ಎಲ್ವಿನ್ನರು ಆದಿವಾಸಿ ಜನಾಂಗದವ ರೊಂದಿಗಿನ ತಮ್ಮ ಅನುಭವಗಳನ್ನು ಕುರಿತು ಬರಿದ ಇಂಗ್ಲಿಷ್ ಕೃತಿಯನ್ನು 'ಗಿರಿಜನ ಪ್ರಪಂಚ' ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಿಸಿದ ಪ್ರಸಿದ್ಧ ಕನ್ನಡ ಜಾನಪದ ವಿದ್ವಾಂಸರು ಯಾರು ?

(A) ಎಂ.ಎಸ್. ಲಠ್ಠೆ

(B) ಎಚ್.ಎಲ್. ನಾಗೇಗೌಡ

(C) ಹಿ.ಶಿ. ರಾಮಚಂದ್ರೇಗೌಡ

(D) ಎಚ್.ಜೆ. ಲಕ್ಕಪ್ಪಗೌಡ

11. ಫಿನಲ್ಯಾಂಡಿನ ಜಗತ್ ಪ್ರಸಿದ್ಧ 'ಫೋಕ್ ಲೋರ್ ಫೆಲೋ' ಪ್ರಶಸ್ತಿಗಳಿಸಿದ ಜೀ.ಶಂ. ಪರಮಶಿವಯ್ಯನವರಿಂದ ಈ ಕೆಳಗಿನ ಯಾವ ಕೃತಿ ರಚಿತವಾಗಿಲ್ಲ ?

I. ಪಿರಿಯಾಪಟ್ಟಣದ ಕಾಳಗ

II. ಎರಡು ಜನಪದ ಖಂಡಕಾವ್ಯಗಳು

III. ಕಿನ್ನರಿ ಜೋಗಿಗಳು

IV. ಗುಮ್ಮಟೆ ಪದಗಳು

V. ಬಬ್ರುವಾಹನ ವಿಜಯ

VI. ಜನಪದ ವೀರಕಾವ್ಯಗಳು

ಇವುಗಳಲ್ಲಿ ಸರಿಯಾದ ಉತ್ತರ :

(A) IV ಮತ್ತು V

(B) I, II ಮತ್ತು VI

(C) III ಮತ್ತು VI

(D) II, III ಮತ್ತು VI

Space for Rough Work / ಒರಟು ಕೆಲಸಕ್ಕೆ ಸ್ಥಳ



12. ಈ ಕೆಳಗೆ ನೀಡಿರುವ ಹೇಳಿಕೆಗಳಲ್ಲಿ ಯಾವ ಜೋಡಿಯು ತಪ್ಪಾಗಿ ಹೊಂದಾಣಿಕೆಯಾಗಿದೆ ?

(A) ವಿರಾಮೋ ಯತಿಃ - ಜಯದೇವ

(B) ವಾಗ್ವಿರಾಮೋ ಯತಿಃ - ಜಯಕೀರ್ತಿ

(C) ಯತಿಯೆಂಬುದುಸಿರ್ವತಾಣಂ - ನಾಗವರ್ಮ

(D) ಶ್ರವ್ಯೋ ವಿರಾಮೋ ಯತಿಃ - ಹೇಮಚಂದ್ರ

13. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| ಪಟ್ಟಿ I | ಪಟ್ಟಿ II |
|---|---|
| a. ಶಾರ್ದೂಲ ವಿಕ್ರೀಡಿತ | i. 19 ಅಕ್ಷರಗಳು |
| b. ಮತ್ತೇಭ ವಿಕ್ರೀಡಿತ | ii. 20 ಅಕ್ಷರಗಳು |
| c. ಸ್ರಗ್ಧರೆ | iii. 22 ಅಕ್ಷರಗಳು |
| d. ಮಹಾಸ್ರಗ್ಧರಾ | iv. 21 ಅಕ್ಷರಗಳು |

ಸಂಕೇತಗಳು :

(A) a-iv, b-i, c-iii, d-ii

(B) a-i, b-iv, c-ii, d-iii

(C) a-i, b-ii, c-iv, d-iii

(D) a-iv, b-iii, c-i, d-ii

14. "ಬಂದಂ ಬಂದಂ ದೇವರ ದೇವಂ
ಬಂದಂ ಬಂದಂ ಗಂಡಂ ದೇವಂ"

ಈ ಮೇಲಿನ ಸಾಲುಗಳು ಯಾವ ರಗಳೆಗೆ ಉದಾಹರಣೆ ಯಾಗಿದೆ ?

(A) ವೀರ ರಗಳೆ

(B) ಉತ್ಸಾಹ ರಗಳೆ

(C) ಲಲಿತ ರಗಳೆ

(D) ಮಂದಾನಿಲ ರಗಳೆ

15. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆ ಯಾದ ಜೋಡಿಯನ್ನು ಗುರುತಿಸಿರಿ :

I. ಭೀಮಕವಿಯ ಬಸವರಾಣ - ಭಾಮಿನಿ ಷಟ್ಪದಿ

II. ಚಾಮರಸನ ಪ್ರಭುಲಿಂಗಲೀಲೆ - ಉದ್ದಂಡ ಷಟ್ಪದಿ

III. ಲಕ್ಷ್ಮೀಶನ ಜೈಮಿನಿಭಾರತ - ವಾರ್ಧಕ ಷಟ್ಪದಿ

IV. ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿ - ಶರ ಷಟ್ಪದಿ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) II ಮತ್ತು IV

(C) I ಮತ್ತು III

(D) III ಮತ್ತು IV

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247
GET IT ON Google Play

16. ಹಸ್ತಪ್ರತಿಗಳ ಸಂಗ್ರಹ, ಸಂಪಾದನ ಕಾರ್ಯಕ್ಕಾಗಿ 1891 ರಲ್ಲಿ ಮೈಸೂರಿನಲ್ಲಿ ಸ್ಥಾಪಿತವಾದ ಒರಿಯೆಂಟಲ್ ಲೈಬ್ರರಿಯಿಂದ ಪ್ರಕಟವಾದ ಮೊದಲ ಕನ್ನಡ ಕೃತಿ ಯಾವುದು ?
(A) ಪಂಪನ ಆದಿಪುರಾಣ
(B) ನಾಗವರ್ಮನ ವರ್ಧಮಾನಪುರಾಣ
(C) ಶಾಂತವೀರನ ಹಾಲಾಸ್ಯಪುರಾಣ
(D) ನಾಗಚಂದ್ರನ ಪಂಪ ರಾಮಾಯಣ

17. 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಇದು ಯಾರ ಪಿ ಎಚ್ ಡಿ ಮಹಾಪ್ರಬಂಧವಾಗಿದೆ ?
(A) ಡಾ. ಎಂ. ಶಿವಕುಮಾರಸ್ವಾಮಿ
(B) ಡಾ. ಎಂ.ಎಂ. ಕಲಬುರ್ಗಿ
(C) ಡಾ. ಎಲ್. ಬಸವರಾಜು
(D) ಡಾ. ಕೀರ್ತಿನಾಥ ಕುರ್ತಕೋಟಿ

18. ಕನ್ನಡ ಛಂದೋಚಿಂತನೆಯ ಕುರಿತು ರಚಿತವಾದ ಕೃತಿಗಳು ಮತ್ತು ಕರ್ತೃಗಳ ಪಟ್ಟಿಯನ್ನು ನೀಡಲಾಗಿದ್ದು, ಸರಿಯಾಗಿ ಹೊಂದಾಣಿಕೆಯಾಗದ ಜೋಡಿಯನ್ನು ಗುರುತಿಸಿರಿ
(A) ಕವೀಶ್ವರ ನರಸಪ್ಪ - ಕರ್ನಾಟಕ ಛಂದೋಮಂಜರಿ
(B) ಕರ್ಣಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ ಸಂಗ್ರಹ - ಚಾವಲಿ ರಾಮಸ್ವಾಮಿ ಶಾಸ್ತ್ರಿ
(C) ಛಂದೋವಿಕಾಸ - ಬಿ.ಎಂ. ಶ್ರೀಕಂಠಯ್ಯ
(D) ಕನ್ನಡ ಛಂದಸ್ಸು - ಟಿ.ವಿ. ವೆಂಕಟಾಚಲ ಶಾಸ್ತ್ರಿ

19. ಪ್ರಾಚೀನ ಕರ್ನಾಟಕದ ಒಂದು ಸುಪ್ರಸಿದ್ಧ ವಿಶ್ವಕೋಶವಾದ 'ಮಾನಸೋಲ್ಲಾಸ' ವನ್ನು ಯಾರು ರಚಿಸಿದ್ದಾರೆ ?
(A) ರುದ್ರಭಟ್ಟ
(B) ನಂಜುಂಡ
(C) ಮುದ್ದಣ
(D) ಮೂರನೇ ಸೋಮೇಶ್ವರ

20. ಈ ಕೆಳಗಿನ ಯಾವ ವಿದ್ವಾಂಸರು ಹಸ್ತಪ್ರತಿಗಳನ್ನು ಪ್ರಥಮ ದರ್ಜೆ, ದ್ವಿತೀಯ ದರ್ಜೆ, ತೃತೀಯ ದರ್ಜೆ ಮತ್ತು ಚತುರ್ಥದರ್ಜೆಯ ಹಸ್ತಪ್ರತಿಗಳೆಂದು ವರ್ಗೀಕರಿಸಿದ್ದಾರೆ ?
(A) ಎಚ್. ದೇವಿರಪ್ಪ
(B) ಡಿ.ಎಲ್. ನರಸಿಂಹಾಚಾರ್ಯ
(C) ಸೀತಾರಾಮ ಜಾಗೀರದಾರ
(D) ಡಾ. ಬಿ.ಆರ್. ಹಿರೇಮಠ

Space for Rough Work / ಒರಟು ಕೆಲಸಕ್ಕೆ ಸ್ಥಳ



21. ಸುಮಾರು 25 ಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿ ಕನ್ನಡ ಸಾರಸ್ವತ ಲೋಕಕ್ಕೆ ಮಹತ್ವದ ಕೊಡುಗೆ ನೀಡಿದ ವಚನ ಪಿತಾಮಹ ಫ.ಗು. ಹಳಕಟ್ಟಿಯವರಿಂದ ಈ ಕೆಳಗನ ಯಾವ ಕೃತಿ ಸಂಪಾದಿಸಲ್ಪಟ್ಟಿಲ್ಲ ?
(A) ಶೂನ್ಯ ಸಂಪಾದನೆ
(B) ಗದಾಯುದ್ಧ ಸಂಗ್ರಹ
(C) ಮೋಳಿಗೆ ಮಾರಯ್ಯನ ವಚನಗಳು
(D) ದೇವರ ದಾಸಿಮಯ್ಯನ ವಚನಗಳು

22. ಇವು ಕನ್ನಡದ ವಿಭಕ್ತಿ ಪ್ರತ್ಯಯಗಳು :
I. ಕಳ್ - ದಿರ್
II. ಆರ್ - ಇರ್
III. ಅನ್ - ಇನ್
IV. ಅಲ್ಲಿ - ಅ
ಇವುಗಳಲ್ಲಿ ಸರಿಯಾದ ಉತ್ತರ :
(A) III ಮತ್ತು IV
(B) II ಮತ್ತು III
(C) I ಮತ್ತು IV
(D) I ಮತ್ತು III

23. ಜಾನಪದ ಕ್ಷೇತ್ರ ಕಾರ್ಯಕರ್ತನಿಗಿರಬೇಕಾದ ಅರ್ಹತೆಗಳು :
I. ಆ ಕ್ಷೇತ್ರದ ಪ್ರಾಥಮಿಕ ತಿಳುವಳಿಕೆ
II. ಆಧುನಿಕ ಉಡುಗೆ ತೊಡುಗೆ
III. ಅಪಾರ ಹಳೆಗನ್ನಡ ಪಾಂಡಿತ್ಯ
IV. ವೈಜ್ಞಾನಿಕ ಉಪಕರಣಗಳ ಬಳಕೆ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV
(B) I ಮತ್ತು II
(C) II ಮತ್ತು III
(D) III ಮತ್ತು IV

24. ಕೆಳಗೆ ಕೊಟ್ಟಿರುವ ರಸಗಳ ಸರಿಯಾದ ಅನುಕ್ರಮಣಿಕೆಯನ್ನು ಗುರುತಿಸಿರಿ :
(A) ವೀರ, ಅದ್ಭುತ, ಶೃಂಗಾರ, ಹಾಸ್ಯ, ರೌದ್ರ, ಕರುಣ, ಭಯ, ಬೀಭತ್ಸ
(B) ಶೃಂಗಾರ, ಹಾಸ್ಯ, ವೀರ, ಕರುಣ, ರೌದ್ರ, ಭಯ, ಬೀಭತ್ಸ, ಅದ್ಭುತ
(C) ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ
(D) ವೀರ, ಹಾಸ್ಯ, ಶೃಂಗಾರ, ಕರುಣ, ರೌದ್ರ, ಬೀಭತ್ಸ, ಅದ್ಭುತ, ಭಯ

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247

GET IT ON Google Play

25. ಈ ಕೆಳಗಿನ ಕಾವ್ಯಮೀಮಾಂಸಕರ ಕಾಲಾನುಕ್ರಮಣಿಕೆಯನ್ನು ಗುರುತಿಸಿರಿ :
(A) ಕುಂತಕ, ಭರತ, ವಿಶ್ವನಾಥ, ದಂಡಿ, ರುದ್ರಟ
(B) ಭರತ, ರುದ್ರಟ, ದಂಡಿ, ಕುಂತಕ, ವಿಶ್ವನಾಥ
(C) ದಂಡಿ, ಭರತ, ರುದ್ರಟ, ವಿಶ್ವನಾಥ, ಕುಂತಕ
(D) ಭರತ, ದಂಡಿ, ರುದ್ರಟ, ಕುಂತಕ, ವಿಶ್ವನಾಥ

26. ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡದ ಸಾಹಿತಿಗಳ ಕಾಲಾನುಕ್ರಮಣಿಕೆಯನ್ನು ಗುರುತಿಸಿರಿ
(A) ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ರಂ.ಶ್ರೀ ಮುಗಳಿ
(B) ಕುವೆಂಪು, ರಂ.ಶ್ರೀ. ಮುಗಳಿ, ದ.ರಾ. ಬೇಂದ್ರೆ, ಶಿವರಾಮ ಕಾರಂತ
(C) ಕುವೆಂಪು, ಶಿವರಾಮ ಕಾರಂತ, ರಂ.ಶ್ರೀ. ಮುಗಳಿ, ದ.ರಾ. ಬೇಂದ್ರೆ
(D) ಕುವೆಂಪು, ರಂ.ಶ್ರೀ. ಮುಗಳಿ, ಶಿವರಾಮ ಕಾರಂತ, ದ.ರಾ. ಬೇಂದ್ರೆ

27. ಈ ಕೆಳಗಿನ ಯಾವ ವಿಮರ್ಶಾ ಕೃತಿಗಳು ಹಾಗೂ ಅವುಗಳ ಕರ್ತೃಗಳ ಹೆಸರು ಸರಿಯಾಗಿ ಹೊಂದಾಣಿಕೆಯಾಗಿದೆ ?
I. ಇಂಗ್ಲೀಷ್ ಭಾಷೆಯಲ್ಲಿ ಆಧುನಿಕ ಭಾಷೆಯ ವಿಮರ್ಶೆ - ಎಲ್.ಎಸ್. ಶೇಷಗಿರಿರಾವ್
II. ಸಾಹಿತ್ಯ ವಿಮರ್ಶೆಯ ಮೂಲತತ್ವಗಳು - ಹೆಚ್.ತಿಪ್ಪೇರುದ್ರಸ್ವಾಮಿ
III. ವಿಮರ್ಶೆಯ ಪರಿಭಾಷೆ - ಸಾ.ಶಿ. ಮರುಳಯ್ಯ
IV. ಕಾವ್ಯಕಲ್ಪನೆ - ಎಂ. ಚಿದಾನಂದ ಮೂರ್ತಿ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು II
(B) III ಮತ್ತು IV
(C) I ಮತ್ತು III
(D) II ಮತ್ತು IV

28. ಇವುಗಳು ಕನ್ನಡದ ಪ್ರಸಿದ್ಧ ಪ್ರಬಂಧ ಕೃತಿಗಳು
I. ಹುಳಿ ಮಾವಿನ ಮರ
II. ಉರಿಬರಲಿ ಸಿರಿಬರಲಿ
III. ನಮ್ಮೂರಿನ ರಸಿಕರು
IV. ಹರಿಜನೋದ್ಧಾರ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು II
(B) II ಮತ್ತು III
(C) I ಮತ್ತು IV
(D) III ಮತ್ತು IV

Space for Rough Work / ಒರಟು ಕೆಲಸಕ್ಕೆ ಸ್ಥಳ



29. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆಯಾಗಿಲ್ಲ ?
I. 'ಶಬ್ದಾರ್ಥೌ ಸಹಿತಾ ಕಾವ್ಯಂ' - ಭಾಮಹ
II. 'ವಾಕ್ಯಂ ರಸಾತ್ಮಕಂ ಕಾವ್ಯಂ' - ರಾಜಶೇಖರ
III. 'ವಿಭಾವಾನುಭಾವವ್ಯಭಿಚಾರೀ ಸಂಯೋಗಾದ್ರಸನಿಷ್ಪತ್ತಿಃ' - ಭರತ
IV. ರೀತಿರಾತ್ಮಾ ಕಾವ್ಯಸ್ಯ - ಕ್ಷೇಮೇಂದ್ರ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV
(B) II ಮತ್ತು III
(C) I ಮತ್ತು III
(D) II ಮತ್ತು IV

30. ಇವು ತದ್ಭವ ಪದಗಳು :
I. ತಟ
II. ಕೋವಣ
III. ಆಕರ
IV. ಬೆನಕ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು II
(B) II ಮತ್ತು IV
(C) III ಮತ್ತು IV
(D) II ಮತ್ತು III

31. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :

*ಹೇಳಿಕೆ :* ಅಸೇನಾರಜದಿಂ ಪರಿ
ಧೂಸರ ಮಾದುದು ನಿಜಾಂಗಮಂ ತೊಳೆಯಲ್ಕೆಂ
ದೋಸರಿಸದೆ ಪೊಕ್ಕಂತಿರೆ
ವಾಸರಕರನಪರವಾರಿನಿಧಿಯಂ ಪೊಕ್ಕಂ

*ವಿವರಣೆ :* ಸೇನೆಯ ಕಾಲ್ತುಳಿತದಿಂದ ಎದ್ದ ಧೂಳು ಮೈಗೆ ಮೆತ್ತಲಾಗಿ, ಅಂಥ ಕೆಂಪು ಧೂಳಿನಿಂದ ಧೂಸರವಾದ ತನ್ನ ದೇಹವನ್ನು ತೊಳೆಯುವದ ಕ್ಕೋಸುಗ ಪಶ್ಚಿಮ ಸಮುದ್ರವನ್ನು ಸೂರ್ಯನು ಹೊಕ್ಕನು.

(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247 GET IT ON Google Play

32. ಭಾಮಹನ ಕಾವ್ಯ ತತ್ವದ ಹೇಳಿಕೆಗಳಲ್ಲಿ ಯಾವುದು ವ್ಯತಿರಿಕ್ತವಾಗಿದೆ ?

(A) ಶಬ್ದ ಮತ್ತು ಅರ್ಥಗಳೆರಡರಲ್ಲಿಯೂ ಕಂಡು ಬರುವ ವಕ್ರೋಕ್ತಿಯನ್ನು ಮಾತ್ರ ಅಲಂಕಾರಗಳೆಂದನು

(B) ಅಲಂಕಾರಗಳೇ ಕಾವ್ಯದ ಸಾರಸರ್ವಸ್ವ ಅವಿಲ್ಲದೆ ಹೋದರ ಕಾವ್ಯತ್ವ ಸಿದ್ಧಿಸುವುದೇ ಇಲ್ಲ

(C) ವೈದರ್ಭಿಯಾಗಲೀ ಗೌಡಿಯಾಗಲೀ ಅಲಂಕಾರ ಸಮನ್ವಿತವಾಗಿದ್ದರೆ ಶ್ರೇಷ್ಠವೆನಿಸಿಕೊಳ್ಳುತ್ತದೆ

(D) ಕಾವ್ಯಕ್ಕೆ ಆತ್ಮ ಸ್ವರೂಪವಾದ ಅಂಶವೊಂದುಂಟೆಂದು ಮೊದಲು ಹೇಳಿದನು

33. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| ಪಟ್ಟಿ I | ಪಟ್ಟಿ II |
|---|---|
| a. ವಿಭಾವ | i. ಲೋಕಾನುಭವ ಪರಿವರ್ತನೆಗೊಂಡು ಕಲಾರೂಪ ಪಡೆಯುವುದು |
| b. ಅನುಭಾವ | ii. ಭಾವದ ಪರಿಣಾಮ ದೈಹಿಕ ಚಲನವಲನಗಳಲ್ಲಿ ಪ್ರಕಟವಾಗುವುದು |
| c. ವ್ಯಭಿಚಾರಿ ಅಥವಾ ಸಂಚಾರಿ ಭಾವ | iii. ಸ್ಥಾಯಿ ಭಾವಕ್ಕೆ ಪೋಷಕವಾಗಿ ಬರುವ ಅಪ್ರಧಾನ ಭಾವಗಳು |
| d. ಸ್ಥಾಯಿ ಭಾವ | iv. ಹೊರಜಗತ್ತಿನ ಪ್ರಚೋದನೆಗೆ ನಮ್ಮ ಮನಸ್ಸು ತೋರಿಸುವ ಪ್ರತಿಕ್ರಿಯೆ |

ಸಂಕೇತಗಳು :

(A) a-i, b-ii, c-iii, d-iv

(B) a-iv, b-iii, c-ii, d-i

(C) a-ii, b-i, c-iii, d-iv

(D) a-iii, b-iv, c-i, d-ii

34. ಔಚಿತ್ಯ ತತ್ವದ ಪ್ರತಿಪಾದಕ ಲಾಕ್ಷಣಿಕರಿವರು :

I. ಕುಂತಕ

II. ಅಭಿನವ ಗುಪ್ತ

III. ಆನಂದ ವರ್ಧನ

IV. ಭಟ್ಟಲೊಲ್ಲಟ

V. ರುದ್ರಟ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು V

(B) I, II, III ಮತ್ತು V

(C) I, II ಮತ್ತು IV

(D) III ಮತ್ತು IV

Space for Rough Work / ಒರಟು ಕೆಲಸಕ್ಕೆ ಸ್ಥಳ



35. ಅರಿಸ್ಟಾಟಲ್ ನ ಕೆಥಾರ್ಸಿಸ್ ಪರಿಕಲ್ಪನೆಗೆ ಸಾಮ್ಯತೆ ಇರುವ ಭಾರತೀಯ ಪರಿಕಲ್ಪನೆ ಯಾವುದು ?

(A) ಔಚಿತ್ಯ

(B) ಧ್ವನಿ ಸಿದ್ಧಾಂತ

(C) ರಸಸಿದ್ಧಾಂತ

(D) ವಕ್ರೋಕ್ತಿ

36. ಇವುಗಳು ಕೋಲ್‌ರಿಜ್‌ರವರ ಕಾವ್ಯಪರಿಕಲ್ಪನೆಗಳು :

I. Depersonalisation

II. Fancy

III. Imagination

IV. Objective Correlative

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV

(B) II ಮತ್ತು III

(C) II ಮತ್ತು IV

(D) I ಮತ್ತು II

37. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| ಪಟ್ಟಿ I (ಸಾಹಿತ್ಯದ ಉದಯಕಾಲ) | ಪಟ್ಟಿ II (ಸಾಹಿತ್ಯ ಪ್ರಕಾರ) |
|---|---|
| a. 9 ನೇ ಶತಮಾನ | i. ಚಂಪೂ |
| b. 10 ನೇ ಶತಮಾನ | ii. ಪಟ್ಟದಿ |
| c. 12 ನೇ ಶತಮಾನ | iii. ಚತ್ತಾಣ ಬೆದಂಡೆ |
| d. 14 ನೇ ಶತಮಾನ | iv. ವಚನ |

ಸಂಕೇತಗಳು :

(A) a-ii, b-iii, c-i, d-iv

(B) a-iii, b-i, c-iv, d-ii

(C) a-i, b-ii, c-iii, d-iv

(D) a-ii, b-iv, c-i, d-iii

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247 | GET IT ON Google Play

38. 'Twinkle twinkle little star' ಎಂಬ ಆಂಗ್ಲ ಭಾಷೆಯ ಶಿಶುಗೀತೆಯನ್ನು ಕನ್ನಡಕ್ಕೆ ಈ ಕೆಳಗಿನಂತೆ ಅನುವಾದಿಸಿದವರಾರು ?

'ಮಿರು ಮಿರುಗುವೆ, ಹಾ ಕಿರು ತಾರಗೆಯೆ ಅರಿಯೆನು ನಾನೆಲೆ ನೀನಾರೋ'

(A) ಟಿ.ಎಸ್. ವೆಂಕಣಯ್ಯ
(B) ಬಿ.ಎಂ. ಶ್ರೀಕಂಠಯ್ಯ
(C) ಹಟ್ಟಿಯಂಗಡಿ ನಾರಾಯಣರಾವ್
(D) ಎಸ್.ಜಿ. ನರಸಿಂಹಾಚಾರ್ಯ

39. ಅಂಶ ಷಟ್ಪದಿಯ ಮೊದಲ ಅರ್ಧದಲ್ಲಿ ಬರುವ ಗಣಗಳ ವಿನ್ಯಾಸ

(A) ಏಳು ವಿಷ್ಣುಗಣಗಳು
(B) ಒಂದು ಬ್ರಹ್ಮಗಣ, ಆರು ವಿಷ್ಣುಗಣ
(C) ಆರು ವಿಷ್ಣುಗಣ, ಒಂದು ರುದ್ರಗಣ
(D) ಒಂದು ಬ್ರಹ್ಮ, ಐದು ವಿಷ್ಣು, ಒಂದು ರುದ್ರಗಣ

40. ಹಳೆಗನ್ನಡದ 'ದೇಗುಲಮಾನ್', ನಡುಗನ್ನಡದಲ್ಲಿ 'ದೇಗುಲಮನ್' ಆದರೆ ಹೊಸಗನ್ನಡದಲ್ಲಿ ಅದು ________ ಎಂದಾಗುತ್ತದೆ.

(A) ದೇಗುಲ
(B) ದೇವಾಲಯ
(C) ದೇಗುಲವನ್ನು
(D) ದೇವಾಲಯವನ್ನು

41. ಭಾಷಿಕ ವ್ಯತ್ಯಾಸಗಳನ್ನು ರೇಖೆಯ ಮುಖಾಂತರ ತೋರಿಸುವ ಘಟಕ ಯಾವುದು ?

(A) ಭಾಷಾ ಭೂಗೋಳ (Linguistic Geography)
(B) ಉಪಭಾಷಾ ಸರಹದ್ದು (Dialect Boundary)
(C) ಭಾಷಾ ಭೂಪಟ (Linguistic Atlas)
(D) ಸೀಮಾರೇಖೆ (Isogloss)

42. ಈ ಕೆಳಗಿನವುಗಳಲ್ಲಿ ತಪ್ಪಾಗಿ ಹೊಂದಾಣಿಕೆಯಾಗಿರುವ ಜೋಡಿಯನ್ನು ಗುರುತಿಸಿರಿ

(A) ಕಾರಯತ್ರೀ ಪ್ರತಿಭೆ ಮತ್ತು ಭಾವಯತ್ರೀಪ್ರತಿಭೆ - ರಾಜಶೇಖರ
(B) ಕಲ್ಪನಾ ಪ್ರತಿಭೆ, ಉಪಮಾ ಪ್ರತಿಭೆ ಮತ್ತು ದರ್ಶನ ಪ್ರತಿಭೆ - ಕುವೆಂಪು
(C) ವಸ್ತುನಿಷ್ಠ ಪ್ರತಿಭೆ ಮತ್ತು ವ್ಯಕ್ತಿನಿಷ್ಠ ಪ್ರತಿಭೆ - ಅರಬಿಂದೋ
(D) ಶ್ರವಣ ಪ್ರತಿಭೆ - ಕೀಟ್ಸ್

Space for Rough Work / ಒರಟು ಕೆಲಸಕ್ಕೆ ಸ್ಥಳ



43. 'ಪುಸ್ತಕದ ಬದನೆಕಾಯಹುದು' ಇದು ಈತನ ಪ್ರಯೋಗ

(A) ರತ್ನಾಕರವರ್ಣಿ
(B) ಮುದ್ದಣ
(C) ರಾಘವಾಂಕ
(D) ಅಸಗ

44. ರಾಷ್ಟ್ರಭಕ್ತಿ, ರಾಷ್ಟ್ರಶಕ್ತಿ, ಜ್ವಾಲಾಮುಖಿ, ವೇದನ ನಿವೇದನ ಕವನ ಸಂಕಲನಗಳನ್ನು ರಚಿಸಿದ ಕವಿಯತ್ರಿ ಯಾರು ?

(A) ವೈದೇಹಿ
(B) ಕೊಡಗಿನ ಗೌರಮ್ಮ
(C) ತಿರುಮಲೆ ರಾಜಮ್ಮ
(D) ವಿಜಯಾದಬ್ಬೆ

45. ವಿಕರಣ ಪ್ರತ್ಯಯಗಳು ಎಂದರೆ

(A) ಕಾಲಸೂಚಕ ಪ್ರತ್ಯಯಗಳು
(B) ವಿಭಕ್ತಿ ಪ್ರತ್ಯಯಗಳು
(C) ಆಖ್ಯಾತ ಪ್ರತ್ಯಯಗಳು
(D) ತದ್ಧಿತ ಪ್ರತ್ಯಯಗಳು

46. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| *ಪಟ್ಟಿ I* | *ಪಟ್ಟಿ II* |
|---|---|
| a. ಸೇಡಿಯಾಪು ಕೃಷ್ಣಭಟ್ಟ | i. ವಿಚಾರ ಪ್ರಪಂಚ |
| b. ಪು.ತಿ. ನರಸಿಂಹಾಚಾರ್ | ii. ಶ್ರೀಹರಿಚರಿತೆ |
| c. ದೇವುಡು ನರಸಿಂಹಶಾಸ್ತ್ರಿ | iii. ಮಹಾಕ್ಷತ್ರಿಯ |
| d. ಶಂಕರಮೊಕಾಶಿ ಪುಣೇಕರ | iv. ಭುವನದ ಭಾಗ್ಯ |
| | v. ಅವಧೇಶ್ವರಿ |

ಸಂಕೇತಗಳು :

(A) a-i, b-ii, c-iii, d-iv
(B) a-i, b-ii, c-iii, d-v
(C) a-v, b-ii, c-iii, d-iv
(D) a-i, b-iv, c-iii, d-v

Space for Rough Work / ಒರಟು ಕೆಲಸಕ್ಕೆ ಸ್ಥಳ

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

ಈ ಕೆಳಗಿನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ. (**47** ನೇಯ ಪ್ರಶ್ನೆಯಿಂದ **51** ನೇ ಪ್ರಶ್ನೆಯವರೆಗೆ)

ಅನಿತುಂ ಕರ್ಮಫಲಂಗಳ |
ನನುಭವಿಸುವ ತಾಣಮಾದ ಭುವನಂಗಳ ನೀ ||
ನನುಗೊಳಿಸಿದಪ್ಪೆಯಿಂದಾ |
ದನುಜಾರಿಗೆ ಪೇಲ್ದಿನೊಲ್ದು ಗಣ್ದರಗಣ್ದಂ || ||೨೯||

ಸಕಲಭುವನಾಧಾರಾ | ಭುವನಂಗಳ್ ಪದಿನಾಲ್ಕು. ಅವೆಲ್ಲ ಮುಂ ಬ್ರಹ್ಮಾಣ್ಡದೊಳಿರ್ಕುಂ. ಅದೆನ್ತೆನೆ: - ಬ್ರಹ್ಮಾಣ್ಡಮೆಂಬುದು ಭರಣಿಯನ್ತೆ ಬಟ್ಟತ್ತಾಗಿರ್ಕುಂ. ಅದರಿಳಗಣಿಮ್ಮು ಆವ ದಿಕ್ಕಿನೊಳ ಮಯ್ವತ್ತುಕೋಟಿ ಯೋಜನದಳತೆಯಾಗಿರ್ಕುಂ. ಅದರೊಳ್ ಕೆಳಗಣಿಂದಣ್ಡಭಿತ್ತಿವಿಡಿದು ಮೇಗಣ್ಗೆ ಗರ್ಭೋದಕಮಿರ್ಪ ಠಾವು ಎಮ್ಬುನ್ತ ಮೂಯಿ ಲಕ್ಷದಯ್ವತ್ತು ಸಾವಿರ ಯೋಜನಮಾರ್ಕುಂ ಅದರ್ಕೆ ಮೇಲೆ ಬಯಲಾಗಿರ್ಪ ಠಾವು ಇರ್ಪತ್ತ ನಾಲ್ಕು ಕೋಟಿಯುಂ ಪದಿ ನಾಲ್ಕು ಲಕ್ಷಮುಂ ನಾಲ್ವತ್ತೆಂಟು ಸಾವಿರಯೋಜನಮಾಗಿರ್ಕುಂ. ಅಲ್ಲಿ ತೆಂಗಣ ಭಾಗದಲ್ಲಿ ರೌರವಾದಿ ನರಕಂಗಳಾಗಿರ್ಕುಂ. ಅದರ್ಕೆ ಮೇಲೆ ಶೇಷಲೋಕಮೆಂಬುದು ಮೂವತ್ತೆರಡು ಸಾವಿರ ಯೋಜನಮಾಗಿರ್ಕುಂ. ಆದರ್ಕೆ ಮೇಲೆ ಭೂಮಿ ಎಲ್ಪತ್ತು ಸಾವಿರ ಯೋಜನೆಮೇಳಗೆ ಒಂದೊಂದು ಹತ್ತು ಸಾವಿರ ಯೋಜನಮಾಗಿ ಮೇಲ್ಮನೆಯ ಮರ್ಯಾದೆಯಲ್ಲಿ ಪಾತಾಳಾದಿಯಾಗಿ ಸಪ್ತಲೋಕಂಗಳಾಗಿರ್ಕುಂ. ಭೂಮಿಗೆ ಮೇಲೆ ನೂರಮಂಡ ಲಪರನ್ತಮೊಂದು ಲಕ್ಷ ಯೋಜನಮಾಗಿರ್ಕುಂ. ಅಂತು ಕೆಳಗಣಂಡದ ಭಿತ್ತಿನಿಡಿದು ಸೂರ್ಯಮಣ್ಡಲ ಪರ್ಯನ್ತಕ್ಕೆ ಇರ್ಪತ್ತೈದು ಕೋಟಿ ಯೋಜನ ಮಾಗಿರ್ಕುಂ. ಅದರ್ಕೆ ಮೇಲೆ ಚಂದ್ರ ಮಂಡಲಂ ಒಂದು ಲಕ್ಷಯೋಜನದಲ್ಲಿಯುಂ. ಅದರ್ಕೆ ಮೇಲೆ ನಕ್ಷತ್ರ ಮಂಡಲದೊಂದು ಲಕ್ಷಯೋಜನದಲ್ಲಿಯುಮಿರ್ಕುಂ. ಅದರ್ಕೆ ಮೇಲೆ ಎರಡು ಲಕ್ಷ ಯೋಜನದಲ್ಲಿ ಬುಧನುಂ, ಅದರ್ಕೆ ಮೇಲೆರಡು ಲಕ್ಷಯೋಜನದಲ್ಲಿ ಶುಕ್ರನುಂ, ಅದರ್ಕೆ ಮೇಲೆರಡು ಲಕ್ಷಯೋಜನದಲ್ಲಿ ಮಂಗಳನುಂ, ಅದರ್ಕೆ ಮೇಲೆರಡು ಲಕ್ಷ ಯೋಜನದಲ್ಲಿ ಬೃಹಸ್ಪತಿಯುಂ, ಅದರ್ಕೆ ಮೇಲೆರಡು ಲಕ್ಷ ಯೋಜನದಲ್ಲಿ ಸಪ್ತರ್ಷಿಮಂಣ್ಡಲಮುಂ, ಅದರ್ಕೆ ಮೇಲೊಂದು ಲಕ್ಷ ಯೋಜನದಲ್ಲಿ ಜ್ಯೋತಿಶ್ಚಕ್ರಕೂಟಸ್ಥನಾದ ಧ್ರುವನುಮಿರ್ಕುಂ. ಅಂತು ಸೂರ್ಯಮಣ್ಡಲದಿಂದೆಮಣ್ಡಲಪರ್ಯನ್ತಂ ಪದಿನಾಲ್ಕು ಲಕ್ಷ ಯೋಜನಮುಂ ಸುವರ್ಲೋಕಮೆನಿಸಿ ಇಂದ್ರಾದಿ ದೇವತೆಗಳ ಸ್ಥಾನಮಾಗಿರ್ಕುಂ. ಅದರ್ಕೆ ಮೇಲೊಂದು ಕೋಟಿ ಯೋಜನಮುಂ ಮಹರ್ಲೋಕಮೆನಿಸಿ ಮೊದಲಿಂದ್ರಾವಿಡದದೊಳಿರ್ದು ಪಟ್ಟಮಂ ತೆಗೆದ ದೈವತೆಗಳ ಸ್ಥಾನಮಾಗಿರ್ಕುಂ. ಅದರ್ಕೆ ಮೇಲೆರಡು ಕೋಟಿ ಯೋಜನಮುಂ ಜನೋಲೋಕಮೆನಿಸಿ ಬ್ರಹ್ಮಪುತ್ರರಾದ ಸನಕಾದಿಮುನಿಗಳ ಸ್ಥಾನಮಾಗಿರ್ಕುಂ. ಅದರ್ಕೆ ಮೇಲೆಣ್ಬುಕೋಟಿ ಯೋಜನೆಮುಂ ತಪೋಲೋಕ ಮೇನಿಸಿ ಓಂಕಾರಾದಿ ಪರಮಖುಷಿಗಳ ಸ್ಥಾನಮಾಗಿರ್ಕುಂ. ಅದರ್ಕೆ ಮೇಲೆ ಪನ್ನೆರಡುಕೋಟಿ ಯೋಜನಮುಂ ಸತ್ಯಲೋಕಮೆನಿಸಿ ಚತುರ್ಮುಖ ಬ್ರಹ್ಮಸ್ಥಾನ ಅದರ್ಕೆ ಮೇಲೊಂದು ಕೋಟಿಯುಮೆಣ್ಬತ್ತಾಟು ಲಕ್ಷ ಯೋಜನಮುಂ ಬಯಲಾಗಿರ್ಕುಂ. ಅಂತು ಸೂರ್ಯಮಣ್ಡಲದಿಂದೆ ಮೇಗಣಣ್ಡಭಿಕ್ತಿಪರ್ಯಂತಕ್ಕೆ ಇರ್ಪತ್ತೈದು ಕೋಟಿಯುಂ, ಕೆಳಗಣಣ್ಡ ಭಿತ್ತಿಪರ್ಯನ್ತಕ್ಕೆ ಇರ್ಪತ್ತೈದು ಕೋಟಿ ಯೋಜನಮುಮಾಗಿ, ಬ್ರಹ್ಮಾಣ್ಡಮ್ಮೈವತು ಕೋಟಿ ಯೋಜನಮುದ್ದಮಾಗಿರ್ಕುಂ. ಇದಱೊಳ್ ನೆಲೆಯುಪ್ಪ ಪದಿನಾಲ್ಕುಂ ಭುವನಂಗಳೊಳಿರ್ಪ ಸಕಲಪ್ರಾಣಿಗಳ ಸ್ವರೂಪ ಸ್ಥಿತಿಪ್ರವೃತ್ತಿಗಳಿಗೆ ನೀನೇ ಕಾರಣಮಾಗಿರ್ಪುದಱಿಂ ಸಕಲಭುವನಾಧಾರನ್ವೈ. ಅದಱಿಂದೆ ಎನ್ನ ಸ್ವರೂಪರೂದಸ್ಥಿತಿಗಳ್ ನಿನ್ನಧೀನಮಾ ಗಿರ್ಪುದೆಂದು ಪಿರಿಯರಿಂ ಕೇಳ್ದು. ಎನ್ನ ಹಿತಾಹಿತದೊಳಾಂ ಕೈದೆರ್ಪೆಂ, ಎನ್ನಂ ಸಲಪುವ ಸೈಪುನಿನ್ನದು ನಿನ್ನ ದನನ್ಯಜನಸುಲಭ. ಶ್ರೀ ಯದುಶೈಲವಲ್ಲಭಾ !

**47.** ನಾರಾಯಣನ ದೇಹದ ಯಾವ ಭಾಗದಿಂದ ರುದ್ರ ಹುಟ್ಟಿದನು ?

(A) ಅಡಿಗಳು
(B) ನಾಭೀಪದ್ಮ
(C) ಹಣೆಯ ಬೆವರು
(D) ಕರಗಳು

**48.** ಎಷ್ಟು ಭುವನಗಳಲ್ಲಿರುವ ಸಕಲಪ್ರಾಣಿಗಳ ಸರೂಪ ಸ್ಥಿತಿಪ್ರವೃತ್ತಿಗಳಿಗೆ ಶ್ರೀಯದುಶ್ಯೆಲ ವಲ್ಲಭನುಕಾರಣ ಎಂದು ಹೇಳಲಾಗಿದೆ ?

(A) ಹದಿನಾಲ್ಕು
(B) ಇಪ್ಪತ್ತೈದು
(C) ಹತ್ತು
(D) ಇಪ್ಪತ್ತು

**49.** ಯಾವ ಲೋಕವು ಚತುರ್ಮುಖ ಬ್ರಹ್ಮನ ಆಸ್ಥಾನವಾಗಿದೆ ?

(A) ತಪೋಲೋಕ
(B) ಸತ್ಯಲೋಕ
(C) ಚಂದ್ರಲೋಕ
(D) ಸೂರ್ಯಲೋಕ

**50.** ಸೂರ್ಯಮಂಡಲದಿಂದ ಧ್ರುವಮಂಡಲ ಪರ್ಯಂತ ಎಷ್ಟು ಯೋಜನಗಳು ಸುವರ್ಲೋಕವೆನಿಸಿ ಇಂದ್ರಾದಿ ದೇವತೆಗಳ ಸ್ಥಾನ ವಾಗಿದೆ ?

(A) ಎರಡು ಲಕ್ಷ
(B) ಒಂದು ಲಕ್ಷ
(C) ಎಂಟು ಕೋಟಿ
(D) ಹದಿನಾಲ್ಕು ಲಕ್ಷ

**51.** ಸನಕಾದಿಮುನಿಗಳು ಯಾರ ಪುತ್ರರೆಂದು ಹೇಳಲಾಗಿದೆ ?

(A) ವಿಷ್ಣುಪುತ್ರರು
(B) ರುದ್ರಪುತ್ರರು
(C) ಬ್ರಹ್ಮಪುತ್ರರು
(D) ಇಂದ್ರಪುತ್ರರು

**Space for Rough Work / ಒರಟು ಕೆಲಸಕ್ಕೆ ಸ್ಥಳ**

**Space for Rough Work / ಒರಟು ಕೆಲಸಕ್ಕೆ ಸ್ಥಳ**

Adda247
GET IT ON Google Play

52. 20ನೇ ಶತಮಾನದ ಪ್ರಸಿದ್ಧ ಮಹಾಕಾವ್ಯಗಳನ್ನು ಪಟ್ಟಿ I ರಲ್ಲಿ, ಅವುಗಳ ಕರ್ತೃಗಳನ್ನು ಪಟ್ಟಿ II ರಲ್ಲಿ ನೀಡಲಾಗಿದೆ.

| ಪಟ್ಟಿ I | ಪಟ್ಟಿ II |
|---|---|
| a. ಭಾರತ ಸಿಂಧೂ ರಶ್ಮಿ | i. ಕುವೆಂಪು |
| b. ಶ್ರೀ ಹರಿಚರಿತೆ | ii. ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| c. ಶ್ರೀ ರಾಮ ಪಟ್ಟಾಭಿಷೇಕ | iii. ಪು.ತಿ. ನರಸಿಂಹಾಚಾರ್ |
| d. ಶ್ರೀ ರಾಮಾಯಣ ದರ್ಶನಂ | iv. ವಿ.ಕೆ. ಗೋಕಾಕ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

(A) a-iv, b-iii, c-ii, d-i
(B) a-iii, b-iv, c-i, d-ii
(C) a-iii, b-i, c-ii, d-iv
(D) a-i, b-ii, c-iii, d-iv

53. ದಕ್ಷಿಣ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆಗಳು

I. ಮಲಯಾಳಂ - ಬಡಗ
II. ತೋಡ - ಇರುಳ
III. ತೆಲುಗು - ಕೊಂಡ
IV. ಸೋಲಿಗ - ಗದಬ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II
(B) II ಮತ್ತು III
(C) III ಮತ್ತು IV
(D) I ಮತ್ತು IV

54. 'ಪದ ಎರಡು ಪಲವು ಮೇಣ್ ಪರ ಪದಾರ್ಥಮಂ ಬಯಸುತಿರೆ' ಎನ್ನುವ ವಿವರಣೆ ಕೆಳಗಿನ ಒಂದು ಸಮಾಸವನ್ನು ಕುರಿತು ಹೇಳಿದ

(A) ದ್ವಿಗು ಸಮಾಸ
(B) ಅಂಶಿ ಸಮಾಸ
(C) ಗಮಕ ಸಮಾಸ
(D) ಬಹುವ್ರೀಹಿ ಸಮಾಸ

55. 'ದ್ರಾವಿಡ ಭಾಷಾ ನಿಷ್ಪತ್ತಿ ಕೋಶ' ಕೃತಿಯ ಕರ್ತೃ ಯಾರು ?

(A) ತೀ.ನಂ. ಶ್ರೀಕಂಠಯ್ಯ
(B) ಎಚ್.ಎಸ್. ಬಿಳಿಗಿರಿ
(C) ಎಲ್.ವಿ. ರಾಮಸ್ವಾಮಿ ಅಯ್ಯಂಗಾರ್
(D) ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ

Space for Rough Work / ಒರಟು ಕೆಲಸಕ್ಕೆ ಸ್ಥಳ

56. ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಗ್ರಂಥವನ್ನು ಬರೆದವರು

I. ವಿಜಯಾ ದಬ್ಬೆ - ವಿ.ಎಂ. ಇನಾಂದಾರ್
II. ರಂ.ಶ್ರೀ. ಮುಗಳಿ - ಮರಿಯಪ್ಪ ಭಟ್ಟ
III. ಎಲ್.ಎಸ್.ಶೇಷಗಿರಿ ರಾವ್ - ಸಿ.ಎನ್. ರಾಮಚಂದ್ರನ್
IV. ಬಿ.ಎಂ.ಶ್ರೀ ಕಂಠಯ್ಯ - ಆರ್. ನರಸಿಂಹಾಚಾರ್

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II
(B) II ಮತ್ತು III
(C) III ಮತ್ತು IV
(D) II ಮತ್ತು IV

57. ದ್ರಾವಿಡ ಭಾಷೆಗಳ ಕ್ರಿಯಾ ಪದಗಳಲ್ಲಿರುವ ಕಾಲಗಳ ಸಂಖ್ಯೆ

(A) ಎರಡು
(B) ಮೂರು
(C) ನಾಲ್ಕು
(D) ಐದು

58. ಮೂರ್ಧನ್ಯ ಧ್ವನಿಗೆ ಉದಾಹರಣೆ

(A) ಹ್, ಪ್
(B) ಕ್, ಚ್
(C) ಸ್, ರ್
(D) ಟ್, ಡ್

59. ಕೆಳಗಿನ I ಮತ್ತು II ಪಟ್ಟಿಗಳನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| ಪಟ್ಟಿ I | ಪಟ್ಟಿ II |
|---|---|
| a. ರಾ.ಯ. ಧಾರವಾಡಕರ್ | i. ವರ್ಣನಾತ್ಮಕ ಭಾಷಾ ವಿಜ್ಞಾನ |
| b. ಕೆ. ಕೆಂಪೇಗೌಡ | ii. ಕನ್ನಡ ಭಾಷಾ ಶಾಸ್ತ್ರ |
| c. ಜೆ.ಎಸ್. ಕುಳ್ಳಿ | iii. ದ್ರಾವಿಡ ಭಾಷಾ ವಿಜ್ಞಾನ |
| d. ಹಂಪ ನಾಗರಾಜಯ್ಯ | iv. ಭಾಷೆ ಮತ್ತು ಭಾಷಾ ವಿಜ್ಞಾನ |

ಸಂಕೇತ :

(A) a-iii, b-i, c-iv, d-ii
(B) a-ii, b-iv, c-i, d-iii
(C) a-iv, b-iii, c-ii, d-i
(D) a-i, b-iii, c-iv, d-ii

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247 GET IT ON Google Play

60. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿ :

| ಪಟ್ಟಿ I | ಪಟ್ಟಿ II |
|---|---|
| a. ನವ್ಯ ವಿಮರ್ಶೆ | i. 1920 – 1930 |
| b. ಚಿರಂತನ ಪ್ರತೀಕ ವಿಮರ್ಶೆ | ii. 1940 – 1950 |
| c. ರಷ್ಯನ್ ರೂಪನಿಷ್ಠವಾದ | iii. 1960 |
| d. ಸಂರಚನಾವಾದಿ ಮತ್ತು ಸ್ತ್ರೀವಾದಿ ವಿಮರ್ಶೆ | iv. 1930 – 1940 |

ಸಂಕೇತಗಳು :

(A) a-iii, b-i, c-iv, d-ii
(B) a-ii, b-iv, c-i, d-iii
(C) a-i, b-iii, c-iv, d-ii
(D) a-iv, b-ii, c-iii, d-i

61. ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ತಪ್ಪಾಗಿ ಹೊಂದಾಣಿಕೆಯಾಗಿದೆ ?

(A) ಪೈಲವಾನ - ಫಾರಸಿ ಭಾಷೆಯ ಶಬ್ದ
(B) ಪಾದ್ರಿ - ಪೋರ್ಚುಗೀಸ್ ಭಾಷೆಯ ಶಬ್ದ
(C) ಹಿಸಾಬ್ - ಮರಾಠಿ ಭಾಷೆಯ ಶಬ್ದ
(D) ಅದಾಲತ್ - ಅರಬ್ಬೀ ಭಾಷೆಯ ಶಬ್ದ

62. ಈ ಕೆಳಗಿನ ಯಾವ ಹೇಳಿಕೆಯು ತಮ್ಮಟಕಲ್ಲು ಶಾಸನಕ್ಕೆ ಅನ್ವಯಿಸುವುದಿಲ್ಲ ?

I. ಈ ಶಾಸನವು ಚಿತ್ರದುರ್ಗ ತಾಲ್ಲೂಕಿನ ತಮ್ಮಟಕಲ್ಲು ಗ್ರಾಮದಲ್ಲಿ ದೊರೆತಿದೆ.
II. ಈ ಶಾಸನವು ಪ್ರಾಸಯುಕ್ತವಾಗಿಲ್ಲ.
III. 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ' ಈ ಶಾಸನದ ಒಂದು ಸಾಲಾಗಿದೆ.
IV. 'ಬಿಣಮಣಿ ಅನ್ತು ಭೋಗಿ ಬಿಣದುಳ್ಮಣಿವಿಲ್ಮನದೋನ್' ಎಂದು ಆರಂಭವಾಗುವ ವೃತ್ತ ಈ ಶಾಸನದಲ್ಲಿದೆ.

ಸರಿಯಾದ ಆಯ್ಕೆಯನ್ನು ಗುರುತಿಸಿರಿ :

(A) I ಮತ್ತು IV
(B) I, III ಮತ್ತು IV
(C) II ಮತ್ತು III
(D) I, II ಮತ್ತು III

63. 'ಕಟ್ಟೆಯುಮೇನೊ ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ' ಈ ಉಕ್ತಿ ಇರುವ ಕೃತಿ

(A) ಪಂಪ ಭಾರತ
(B) ಲೀಲಾವತಿ ಪ್ರಬಂಧ
(C) ಅನಂತನಾಥ ಪುರಾಣ
(D) ಅಜಿತ ತೀರ್ಥಂಕರ ಪುರಾಣ

Space for Rough Work / ಒರಟು ಕೆಲಸಕ್ಕೆ ಸ್ಥಳ



64. ಶಾಸನಗಳ ಕಾಲಾನುಕ್ರಮವನ್ನು ಗುರುತಿಸಿರಿ

(A) ಹಲ್ಮಿಡಿ ಶಾಸನ, ಆತಕೂರು ಶಾಸನ, ಗಂಗಾಧರಂ ಶಾಸನ, ಲಕ್ಕುಂಡಿ ಶಾಸನ
(B) ಗಂಗಾಧರಂ ಶಾಸನ, ಹಲ್ಮಿಡಿ ಶಾಸನ, ಲಕ್ಕುಂಡಿ ಶಾಸನ, ಆತಕೂರು ಶಾಸನ
(C) ಗಂಗಾಧರಂ ಶಾಸನ, ಲಕ್ಕುಂಡಿ ಶಾಸನ, ಹಲ್ಮಿಡಿ ಶಾಸನ, ಆತಕೂರು ಶಾಸನ
(D) ಹಲ್ಮಿಡಿ ಶಾಸನ, ಗಂಗಾಧರ ಶಾಸನ, ಲಕ್ಕುಂಡಿ ಶಾಸನ, ಆತಕೂರು ಶಾಸನ

65. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| ಪಟ್ಟಿ I (ಕವಿ) | ಪಟ್ಟಿ II (ಆಶ್ರಯದಾತ) |
|---|---|
| a. ರುದ್ರಭಟ್ಟ | i. ರೇಚಣ ಚಮೂಪ |
| b. ಆಚಣ್ಣ | ii. ವೀರಬಲ್ಲಾಳ |
| c. ಪಾರ್ಶ್ವಪಂಡಿತ | iii. ಲಕ್ಷ್ಮೀಧರ |
| d. ನೇಮಿಚಂದ್ರ | iv. ರಟ್ಟಕಾರ್ತವೀರ್ಯ |
| | v. ರಾಚಮಲ್ಲ |

ಸಂಕೇತಗಳು :

(A) a-ii, b-iii, c-i, d-v
(B) a-i, b-ii, c-iii, d-iv
(C) a-ii, b-i, c-iv, d-iii
(D) a-iv, b-iii, c-ii, d-i

66. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| ಪಟ್ಟಿ I | ಪಟ್ಟಿ II |
|---|---|
| a. ಹದಿಬದೆಯ ಧರ್ಮ | i. ಗದ್ಯ |
| b. ಮಿತ್ರಾವಿಂದಾ ಗೋವಿಂದ | ii. ಚಂಪೂ |
| c. ರಾಮಾಶ್ವಮೇಧ | iii. ಸಾಂಗತ್ಯ |
| d. ರಾಜಶೇಖರ ವಿಲಾಸ | iv. ನಾಟಕ |

ಸಂಕೇತಗಳು :

(A) a-i, b-ii, c-iv, d-iii
(B) a-iv, b-iii, c-ii, d-i
(C) a-ii, b-i, c-iv, d-iii
(D) a-iii, b-iv, c-i, d-ii

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247 | GET IT ON Google Play

67. "ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ ವ್ಯಾಸನೆಂಬ ಗರ್ವಮೆನಗಿಲ್ಲ" ಈ ಹೇಳಿಕೆ ವ್ಯಕ್ತಪಡಿಸುವುದೇನೆಂದರೆ

(A) ವೇದವ್ಯಾಸರಲ್ಲಿದ್ದ ವಿನಯ ಮತ್ತು ವಿಧೇಯತೆ

(B) ಪಂಪನಿಗೆ ವ್ಯಾಸರ ಬಗೆಗಿದ್ದ ವಿನಯ ಮತ್ತು ವಿಧೇಯತೆ

(C) ಕುಮಾರವ್ಯಾಸನ ಬಗೆಗೆ ಪಂಪನಿಗಿದ್ದ ವಿನಯ ಮತ್ತು ವಿಧೇಯತೆ

(D) ರನ್ನನಿಗೆ ವ್ಯಾಸರ ಬಗೆಗಿದ್ದ ವಿನಯ ಮತ್ತು ವಿಧೇಯತೆ

68. ಬಾಜನೆಗಬ್ಬದ ಲಕ್ಷಣವನ್ನು ಹೋಲುವ ಅಚ್ಚಗನ್ನಡ ಕಾವ್ಯ ಪ್ರಭೇದವಾವುದು ?

(A) ಚಂಪೂ

(B) ಚತ್ತಾಣ

(C) ಬೆದಂಡೆ

(D) ರಗಳೆ

69. ಇವರು ರಾಜಾಶ್ರಯದಲ್ಲಿದ್ದು ಕೃತಿಗಳನ್ನು ರಚಿಸಿದವರಾಗಿದ್ದಾರೆ

I. ಪಂಪ ಮತ್ತು ರನ್ನ

II. ಪೊನ್ನ ಮತ್ತು ಚಾವುಂಡರಾಯ

III. ಹರಿಹರ ಮತ್ತು ಬಸವಣ್ಣ

IV. ಲಕ್ಷ್ಮೀಶ ಮತ್ತು ಮುದ್ದಣ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) I ಮತ್ತು III

(C) II ಮತ್ತು III

(D) III ಮತ್ತು IV

70. 'ಶಬ್ದಮಣಿದರ್ಪಣಂ' ಕೃತಿಗೆ ಸಂಬಂಧಿಸಿದಂತೆ ತಪ್ಪಾಗಿರುವ ಹೇಳಿಕೆಯನ್ನು ಗುರುತಿಸಿರಿ :

(A) ಈ ಕೃತಿಯನ್ನು ಮೊತ್ತಮೊದಲಿಗೆ ಪ್ರಕಟಿಸಿದ ಆಂಗ್ಲ ಪಂಡಿತ ಜೆ. ಗ್ಯಾರೆಟ್

(B) ಈ ಹಳಗನ್ನಡ ವ್ಯಾಕರಣ ಗ್ರಂಥದ ಕರ್ತೃ ಕೇಶಿರಾಜ

(C) 'ಸಿರಿಗೀಕ್ಷಿಪ ರಸಚಿತ್ರಂ ಸರಸತಿಗೆರಡನೆಯ ಬೀಣೆ' ಎಂದು ಬುಧರು, ಶಬ್ದಮಣಿ ದರ್ಪಣವನ್ನು ವರ್ಣಿಸಿದ್ದಾರೆ

(D) ಇದರಲ್ಲಿ ಸೂತ್ರಗಳು ಕಂದದಲ್ಲಿದ್ದು, ವೃತ್ತಿಯು ಗದ್ಯದಲ್ಲಿದೆ

Space for Rough Work / ಒರಟು ಕೆಲಸಕ್ಕೆ ಸ್ಥಳ

71. ವಡ್ಡಾರಾಧನೆಯ ಸ್ವರೂಪ ಹೀಗಿದೆ

(A) ಹಲವು ಬಿಡಿಕತೆಗಳ ಒಂದು ಗುಚ್ಛ

(B) ಹಲವು ಉಪಕಥೆಗಳಿಂದ ಕೂಡಿದ ಒಂದು ದೀರ್ಘ ಕಥೆ

(C) ಒಂದಕ್ಕೊಂದು ಸಂಬಂಧ ಹೊಂದಿರುವ ಕಥೆಗಳ ಗುಚ್ಛ

(D) ಒಂದೇ ಕಥೆ

72. ಅಶೋಕ ಸಾಮ್ರಾಟನ ಬಿರುದಿನ ಜೊತೆಗೆ ಹೆಸರನ್ನೂ ಹೇಳುವ ಶಾಸನ ಯಾವುದು ?

(A) ಜಟಿಂಗ ರಾಮೇಶ್ವರ

(B) ಮಸ್ಕಿ

(C) ಕೊಪ್ಪಳ

(D) ಬ್ರಹ್ಮಗಿರಿ

73. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :

*ಹೇಳಿಕೆ:* ಜನಮೆಚ್ಚು ಶುದ್ಧನಲ್ಲದೆ ಮನ ಮೆಚ್ಚು ಶುದ್ಧನಲ್ಲವಯ್ಯ, ತನುವಿನ ಮೇಲೆ ಬ್ರಹ್ಮಚರ್ಯತ್ತ್ವವಳವಟ್ಟರೇನು, ಮನದ ಮೇಲೆ ಬ್ರಹ್ಮಚರ್ಯತ್ತ್ವವಳ ವಡದನ್ನಕ್ಕ ?

*ವಿವರಣೆ:* ಜನ ಒಪ್ಪುವ ಹಾಗೆ ಶುದ್ಧಿ ಇದೆಯೇ ಹೊರತು ಮನಮೆಚ್ಚುವಂತೆ ಶುದ್ಧತೆ ಇಲ್ಲ ಮನಸ್ಸಿನಲ್ಲಿ ಬ್ರಹ್ಮಚರ್ಯ ಇಲ್ಲದಿದ್ದರೆ ಬ್ರಹ್ಮಚರ್ಯವು ದೇಹಕ್ಕೆ ಇದ್ದರೇನು ?

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ಸರಿ

74. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :

*ಹೇಳಿಕೆ:* ತ್ರಿಪದಿಯು ಕನ್ನಡ ಛಂದೋಗಂಗೆಯ ಗಂಗೋತ್ರಿ

*ವಿವರಣೆ:* ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ತ್ರಿಪದಿಗೆ ಗಂಗಾನದಿಗಿರುವ ಪವಿತ್ರಸ್ಥಾನ ಲಭಿಸಿದೆ.

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ತಪ್ಪು, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ತಪ್ಪು

75. ಈ ಕೆಳಗಿನವುಗಳಲ್ಲಿ ಯಾವುದು ಪೊನ್ನನ ಗ್ರಂಥವಲ್ಲ ?

(A) ಕಾವ್ಯಾವಲೋಕನ

(B) ಭುವನೈಕ ರಾಮಾಭ್ಯುದಯ

(C) ಜಿನಾಕ್ಷರ ಮಾಲೆ

(D) ಶಾಂತಿ ಪುರಾಣ

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247 GET IT ON Google Play

76. ಇವು 'ಸಾಂಗತ್ಯ' ದಲ್ಲಿರುವ ಕೃತಿಗಳು

I. ಭರತೇಶ ವೈಭವ - ಹದಿಬದೆಯ ಧರ್ಮ
II. ಬಸವರಾಜ ವಿಜಯ - ಅದ್ಭುತ ರಾಮಾಯಣ
III. ಕುಮಾರ ರಾಮನ ಕಥೆ - ರಾಮಧಾನ್ಯ ಚರಿತೆ
IV. ಮೋಹನ ತರಂಗಿಣಿ - ಪರಮಾನುಭವ ಬೋಧೆ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II
(B) I ಮತ್ತು IV
(C) II ಮತ್ತು III
(D) III ಮತ್ತು IV

77. ಈ ಕೆಳಗಿನವುಗಳನ್ನು ಸರಿಯಾದ ಕಾಲಾನುಕ್ರಮದಲ್ಲಿ ಬರೆಯಿರಿ

(A) ಮುದ್ದಣ, ಲಕ್ಷ್ಮೀಶ, ಕುಮಾರವ್ಯಾಸ, ನಾಗಚಂದ್ರ
(B) ಲಕ್ಷ್ಮೀಶ, ಕುಮಾರವ್ಯಾಸ, ನಾಗಚಂದ್ರ, ಮುದ್ದಣ
(C) ಕುಮಾರವ್ಯಾಸ, ನಾಗಚಂದ್ರ, ಮುದ್ದಣ, ಲಕ್ಷ್ಮೀಶ
(D) ನಾಗಚಂದ್ರ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ

78. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| *ಪಟ್ಟಿ I* | *ಪಟ್ಟಿ II* |
|---|---|
| a. ಪುರಂದರದಾಸರು | i. ನಮ್ಮಮ್ಮ ಶಾರದೆ ಉಮಾಮಹೇಶ್ವರಿ |
| b. ಕನಕದಾಸರು | ii. ಅರಿತವರಿಗತಿ ಸುಲಭ ಹರಿಯ ಪೂಜೆ |
| c. ವಿಜಯದಾಸರು | iii. ಪವಮಾನ ಜಗದಪ್ರಾಣ |
| d. ಜಗನ್ನಾಥದಾಸರು | iv. ಮಾನವ ಜನ್ಮ ದೊಡ್ಡದು |
| | v. ಶ್ರೀರಂಗ ವಿಠಲನ ಶ್ರೀಚರಣಕೆ ಶರಣು |

ಸಂಕೇತಗಳು :

(A) a-iv, b-i, c-iii, d-ii
(B) a-i, b-v, c-iv, d-iii
(C) a-iv, b-iii, c-v, d-i
(D) a-iv, b-ii, c-i, d-iii

Space for Rough Work / ಒರಟು ಕೆಲಸಕ್ಕೆ ಸ್ಥಳ

79. ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆಯಾಗಿಲ್ಲ ?

(A) ಸಿದ್ಧರಾಮ - ಕಪಿಲಸಿದ್ಧ ಮಲ್ಲಿಕಾರ್ಜುನ
(B) ಚನ್ನಬಸವಣ್ಣ - ಕೂಡಲ ಚನ್ನಸಂಗಯ್ಯ
(C) ಅಂಬಿಗರ ಚೌಡಯ್ಯ - ಅಮರೇಶ್ವರ ಲಿಂಗ
(D) ಜೇಡರ ದಾಸಿಮಯ್ಯ - ರಾಮನಾಥ

80. ಕೆಳಗಿನವುಗಳಲ್ಲಿ ಯಾವುದು/ಯಾವವು ಸರಿಯಾಗಿ ಹೊಂದಾಣಿಕೆಯಾಗಿಲ್ಲ ?

I. ರತ್ನಾಕರವರ್ಣಿ - ಅಪರಾಜಿತೇಶ್ವರ ಶತಕ
II. ಕುಮಾರ ವಾಲ್ಮೀಕಿ - ವೈರಾವಣ ಕಾಳಗ
III. ಚಾಮರಸ - ಶಿವತತ್ವ ಚಿಂತಾಮಣಿ
IV. ಲಕ್ಕಣದಂಡೇಶ - ಪರಮಾನುಭವ ಬೋಧೆ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II
(B) III ಮತ್ತು IV
(C) ಕೇವಲ II
(D) I, II, III ಮತ್ತು IV

81. ಮುಮ್ಮಡಿ ಕೃಷ್ಣರಾಜ ಒಡೆಯರ್ ರವರ ರಾಜಾಶ್ರಯದಲ್ಲಿದ್ದ ಕವಿಗಳು

I. ಕೆಂಪುನಾರಾಯಣ ಮತ್ತು ದೇವಚಂದ್ರ
II. ತಿರುಮಲಾರ್ಯ ಮತ್ತು ಚಿಕ್ಕಪಾಧ್ಯಾಯ
III. ಬಸವಪ್ಪಶಾಸ್ತ್ರಿ ಮತ್ತು ಅಳಿಯ ಲಿಂಗರಾಜ
IV. ಲಕ್ಕಣದಂಡೇಶ ಮತ್ತು ಚಾಟು ವಿಠಲನಾಥ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III
(B) II ಮತ್ತು IV
(C) I ಮತ್ತು IV
(D) I, II ಮತ್ತು IV

82. 'ಕನ್ನಡ ಸುವಾರ್ತಿಕ' ಎಂಬ ಕನ್ನಡದ ಎರಡನೇ ಪತ್ರಿಕೆಯನ್ನು ಪ್ರಾರಂಭಿಸಿದವರು ಯಾರು ?

(A) ಬಿ.ಎಲ್. ರೈಸ್
(B) ಕರ್ನಲ್ ಮೆಕಂಜಿ
(C) ಜೆ.ಎಫ್. ಪ್ಲೀಟ್
(D) ಹರ್ಮನ್ ಮೊಗ್ಲಿಂಗ್

Space for Rough Work / ಒರಟು ಕೆಲಸಕ್ಕೆ ಸ್ಥಳ

Adda247

GET IT ON Google Play

83. ಕನ್ನಡದ ನವ್ಯ ಕವಿತೆಗಳು

I. ಪಾಂಡುಮಾದ್ರಿ - ಚಂಡೆಮದ್ದಳೆ

II. ಕುರುಡು ಕಾಂಚಾಣ - ನೆರಳು

III. ಪ್ರಾರ್ಥನೆ - ಏಳುಸುತ್ತಿನ ಕೋಟೆ

IV. ಕನ್ನಡಿಗರ ತಾಯಿ - ಕೋಗಿಲೆ ಮತ್ತು ಸೋವಿಯಟ್ ರಷ್ಯಾ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) II ಮತ್ತು IV

(C) II ಮತ್ತು III

(D) I ಮತ್ತು III

84. ಸರಿಯಾಗಿ ಹೊಂದಾಣಿಕೆಯಾಗದ ಜೋಡಿಯನ್ನು/ಜೋಡಿಗಳನ್ನು ಗುರುತಿಸಿರಿ :

I. ಚಕ್ರತೀರ್ಥ - ಚದುರಂಗ

II. ಖಾನಾವಳಿಯನೀಲಾ - ಬಸವರಾಜ ಕಟ್ಟೀಮನಿ

III. ಗಾರ್ಕಿಯ ಕಥೆ - ಅನಕೃ

IV. ಬಿತ್ತಿದ್ದೆ ಬೇವು - ಬೀchi

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು III

(B) III ಮತ್ತು IV

(C) ಕೇವಲ I

(D) ಕೇವಲ III

85. ಮಧುರ ಚನ್ನರಿಗೆ ಸಂಬಂಧಿಸಿದಂತೆ ಸರಿಯಾಗಿರುವ ಹೇಳಿಕೆಗಳನ್ನು ಗುರುತಿಸಿರಿ

I. ಇವರ ನಿಜನಾಮ ಸಿದ್ದಲಿಂಗಪ್ಪ ಗಲಗಲಿ

II. ನನ್ನ ನಲ್ಲ ಮತ್ತು ಇತರ ಕವನಗಳು ಇವರ ಕವನ ಸಂಕಲನ

III. ಇವರು 1947 ರಲ್ಲಿ ಜರುಗಿದ ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು

IV. 'ಬಸವಣ್ಣನವರ ಭೋಜನ ಶಾಲೆ' ಇವರು ಬರೆದ ನಾಟಕವಾಗಿದೆ.

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು IV

(B) II ಮತ್ತು III

(C) I, III ಮತ್ತು IV

(D) I, II, III ಮತ್ತು IV



86. ಕೆಳಗಿನ ಪಟ್ಟಿ I ಮತ್ತು ಪಟ್ಟಿ II ಅನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿರಿ :

| *ಪಟ್ಟಿ I* | *ಪಟ್ಟಿ II* |
|---|---|
| a. ಹೆಚ್.ಎಸ್. ಶಿವಪ್ರಕಾಶ್ | i. ಋಷ್ಯಶೃಂಗ |
| b. ಪಿ. ಲಂಕೇಶ | ii. ಸಂಸ್ಕೃತಿ ಉಪಸಂಸ್ಕೃತಿ |
| c. ಬರಗೂರು ರಾಮಚಂದ್ರಪ್ಪ | iii. ಗುಣಮುಖ |
| d. ಚಂದ್ರಶೇಖರ ಕಂಬಾರ | iv. ಮಂಟೇಸ್ವಾಮಿ ಪ್ರಸಂಗ |

ಸಂಕೇತಗಳು :

(A) a-iv, b-iii, c-ii, d-i

(B) a-iv, b-i, c-ii, d-iii

(C) a-i, b-iii, c-iv, d-ii

(D) a-i, b-ii, c-iii, d-iv

87. 'ನೆನಪಿನ ಗಣಿಯಿಂದ' ಇದು ಯಾವ ಪ್ರಸಿದ್ಧ ಕನ್ನಡ ಸಾಹಿತಿಯ ಆತ್ಮಚರಿತ್ರೆಯಾಗಿದೆ ?

(A) ಎಸ್.ವಿ. ಪರಮೇಶ್ವರ ಭಟ್ಟ

(B) ದಿನಕರ ದೇಸಾಯಿ

(C) ಕುವೆಂಪು

(D) ಎಂ.ಗೋಪಾಲ ಕೃಷ್ಣ ಅಡಿಗ

88. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆ ಯಾಗಿಲ್ಲ ?

(A) ಅಪರವಯಸ್ಕನ ಅಮೆರಿಕಾ ಯಾತ್ರೆ - ಎ.ಎನ್. ಮೂರ್ತಿರಾವ್

(B) ಅಮೆರಿಕಾದಲ್ಲಿ ನಾನು - ಬಿ.ಜಿ.ಎಲ್. ಸ್ವಾಮಿ

(C) ಸ್ನೇಹಾಯಾತ್ರೆ - ಅನುಪಮಾನಿರಂಜನ

(D) ಚೀನಾದೇಶದ ಬೌದ್ಧ ಯಾತ್ರಿಕರು - ವಿ.ಕೃ. ಗೋಕಾಕ

89. ಇವುಗಳಲ್ಲಿ ಯಾವುದುಸ ರಿಯಾಗಿ ಹೊಂದಾಣಿಕೆ ಆಗಿದೆ ?

(A) ಮೂಕನಿಗೆ ಬಾಯಿ ಬಂದಾಗ - ದೇವನೂರು ಮಹಾದೇವ

(B) ಕಪ್ಪು ಕಾವ್ಯ - ಅರವಿಂದ ಮಾಲಗತ್ತಿ

(C) ಪಂಚಮ - ಧರಣಿದೇವಿ

(D) ತಮಟೆ - ಬಿ.ಟಿ. ಲಲಿತಾ ನಾಯಕ್

Adda247 GET IT ON Google Play

90. ಪ್ರಾಚೀನ ಗ್ರೀಕ್ ಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧವಾದ ಓಡ್ ಭಾವಗೀತೆಯ ಒಂದು ಒಳಜಾತಿಯಾಗಿದ್ದು, ಇದನ್ನು ಕನ್ನಡದಲ್ಲಿ ಏನೆಂದು ಕರೆಯಲಾಗುತ್ತದೆ ?

(A) ಸುನೀತ (B) ಖಂಡಕಾವ್ಯ
(C) ಪ್ರಗಾಥ (D) ಕಥನ ಕಾವ್ಯ

91. ಈ ಕೆಳಗಿನವುಗಳಲ್ಲಿ ಯಾವುದು ಪಂಜೆ ಮಂಗೇಶರಾಯರು ಬರೆದ ಮಕ್ಕಳ ಕವಿತೆಯಾಗಿಲ್ಲ ?

(A) ಬೊಕ್ಕಬಾಯಿ ಕೊಕ್ಕೇರಾಜ (B) ಬಣ್ಣದ ತಗಡಿನ ತುತ್ತೂರಿ
(C) ನಾಗರ ಹಾವೇ ಹಾವೊಳು ಹೂವೆ (D) ಗುಡುಗುಡು ಗುಮ್ಮಟದೇವರು

92. ಕಾಡು, ಮಣ್ಣಿನ ಹಾಡು, ಮಣ್ಣಿನ ಹಾಡು, ಗೀಜಗದ ಗೂಡು ಕೃತಿಗಳನ್ನು ರಚಿಸಿದ ಪ್ರಸಿದ್ಧ ಸಾಹಿತಿ ಯಾರು ?

(A) ಶ್ರೀಕೃಷ್ಣ ಆಲನಹಳ್ಳಿ (B) ಕೆ.ಪಿ. ಪೂರ್ಣಚಂದ್ರ ತೇಜಸ್ವಿ
(C) ಕುವೆಂಪು (D) ಎಲ್.ಆರ್. ಹೆಗಡೆ

93. ಈ ಕೆಳಗಿನವುಗಳಲ್ಲಿ ಯಾವ ಜೋಡಿಯು/ಜೋಡಿಗಳು ತಪ್ಪಾಗಿ ಹೊಂದಾಣಿಕೆಯಾಗಿದೆ ?

I. ಡಾ. ಗೀತಾ ನಾಗಭೂಷಣ - ಹಸಿಮಾಂಸ ಮತ್ತು ಹದ್ದುಗಳು
II. ಬಾನು ಮುಷ್ತಾಕ್ - ಬಡವರ ಮಗಳು ಹೆಣ್ಣಲ್ಲ
III. ವೀಣಾ ಶಾಂತೇಶ್ವರ - ಮುಳ್ಳುಗಳು
IV. ಸಬಿಹಾ ಭೂಮಿಗೌಡ - ರೊಟ್ಟಿ ಮತ್ತು ಹುಡುಗಿ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II (B) I ಮತ್ತು IV
(C) ಕೇವಲ I (D) ಕೇವಲ IV

94. ವಸಾಹತೋತ್ತರ ಚಿಂತನೆಯ ಪ್ರಮುಖ ಚಿಂತಕ

(A) ಆಯ್.ಎ. ರಿಚರ್ಡ್ಸ್
(B) ಜಾರ್ಜ್ ಲುಕಾಸ್
(C) ಎಡ್ವರ್ಡ್ ಸಯೀದ್
(D) ರೇಮಂಡ್ ವಿಲಿಯಮ್ಸ್

Space for Rough Work / ಒರಟು ಕೆಲಸಕ್ಕೆ ಸ್ಥಳ

95. ಲಿಪಿಯುಕ್ತವಾದ ದ್ರಾವಿಡ ಭಾಷೆಗಳು ಈ ಕೆಳಗಿನಂತಿವೆ

(A) ತಮಿಳು, ತೆಲುಗು, ಬ್ರಾಹೂಇ, ಕುವಿ, ಕುಯಿ
(B) ಮಲೆಯಾಳಂ, ತೊಡ, ಕೊರಬ, ಕುರುಬ
(C) ಕನ್ನಡ, ತುಳು, ಕೊಡವ, ಪರ್ಜಿ
(D) ಕನ್ನಡ, ತಮಿಳು, ತೆಲುಗು, ಮಲಯಾಳಂ

96. ಕಮ್ಮಿತು + ನಾಡು = ಕನ್ನಡ ಎಂದು ಹೇಳಿದವರು

(A) ರಾ. ನರಸಿಂಹಾಚಾರ್ಯರು (B) ಹಟ್ಟಿಯಂಗಡಿ ನಾರಾಯಣ ರಾಯರು
(C) ದ.ರಾ. ಬೇಂದ್ರೆ (D) ಜಿ.ಎಸ್. ಶಿವರುದ್ರಪ್ಪ

97. ಕೇಶಿರಾಜನು ಹೇಳುವ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಇದೂ ಒಂದು

(A) ತತ್ಪುರಷ ಸಮಾಸ (B) ದ್ವಿಗು ಸಮಾಸ
(C) ಗಮಕ ಸಮಾಸ (D) ಕ್ರಿಯಾ ಸಮಾಸ

98. ಸು.ರಂ. ಎಕ್ಕುಂಡಿಯವರ ಯಾವ ಶೀರ್ಷಿಕೆಯ ರಷಿಯನ್ ಕವಿತೆಗಳ ಅನುವಾದಿತ ಸಂಕಲನಕ್ಕೆ 1970 ರಲ್ಲಿ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿದೊರೆಯಿತು ?

(A) ಮತ್ಸ್ಯಗಂಧಿ (B) ಪ್ರತಿಬಿಂಬಗಳು
(C) ನೆರಳು (D) ಬಕುಲದ ಹೂಗಳು

99. ಅನೇಕ ಮರಾಠಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಕುಸುಮಾಕರ ದೇವರಗೆಣ್ಣೂರು ಇವರ ಯಾವ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ ?

(A) ನಾಲ್ಕನೆಯ ಆಯಾಮ (B) ದುರ್ದಮ್ಯ
(C) ಬಯಲು ಬಸಿರು (D) ನಿರೀಂದ್ರಿಯ

100. ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿದ ಕನ್ನಡದ ಪ್ರಸಿದ್ಧ ಲೇಖಕರು ಯಾರು ?

(A) ಎ.ಕೆ.ರಾಮಾನುಜನ್ (B) ಗಿರಡ್ಡಿ ಗೋವಿಂದರಾಜ್
(C) ಡಿ.ಆರ್. ನಾಗರಾಜ್ (D) ಹಾ.ಮಾ. ನಾಯಕ್

Space for Rough Work / ಒರಟು ಕೆಲಸಕ್ಕೆ ಸ್ಥಳ